5	ಸೇವೆಯಿಂದ ವಿಮೋಚನೆ / ವಜಾ ಆದ ವೈದ್ಯರುಗಳು	36
6	ಕೆ ಸಿ ಎಸ್ ಆರ್ ನಿಯಮ – 106ಎ ರಂತೆ ಸಕ್ರಮಗೊಳಿಸಿದ ಪ್ರಕರಣಗಳು	06
	ಒಟ್ಟು	**146**

ನೀರಾವರಿಗೆ ಬೋರ್ ವೆಲ್ ಬಾವಿ ನೀರು ಬಳಕೆ ನಿಷೇಧ

20 (213) ಶ್ರೀ ಚಿಕ್ಕನಗೌಡರ ಸಿದ್ಧನಗೌಡರ ಈಶ್ವರಗೌಡ (ಕಲ್ಲಟಗಿ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನೀರಾವರಿಗೆ ಬೋರ್‌ವೆಲ್ ಬಾವಿ ನೀರು ಬಳಕೆ ನಿಷೇದಿಸಿ ಸರ್ಕಾರ ಆದೇಶ ಹೊರಡಿಸಿದೆಯೇ

ಆ) ಈ ನಿಯಮದ ಉದ್ದೇಶವೇನು ಇಂತಹ ಬೋರ್‌ವೆಲ್‌ಗಳನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದೆಯೆ

ಇ) ಇದರಿಂದ ಉಳಿತಾಯವಾಗುವ ನೀರನ್ನು ಕುಡಿಯಲು ಬಳಸಲಾಗುವುದೇ? ಹೊಸದಾಗಿ ಬೋರ್‌ವೆಲ್ ಕೊರೆಸಲು ನಿಯಮಗಳನ್ನು ಜಾರಿಗೆ ತಂದಿದೆಯೇ ಇದರ ಮಾನದಂಡಗಳೇನು

ಈ) ಈಗಾಗಲೇ ಅನಿರ್ಭಂದಿತವಾಗಿ ಕೊರೆಸಿರುವ ಬೋರ್‌ವೆಲ್‌ಗಳನ್ನು ಏನು ಮಾಡಲಾಗುತ್ತದೆ?

ಶ್ರೀ ಕೆ ಬಿ ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮಾತ್ರ ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಒಂದು ನಿರ್ಣಯವನ್ನು ಜಲಸಂಪನ್ಮೂಲ ಇಲಾಖೆ ಕೈಗೊಂಡಿದೆ ಆದರೆ ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಜಲ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮದ 1999 ದಿ 27 10 2003 ರಿಂದ ಜಾರಿಗೆ ಬಂದಿರುತ್ತದೆ ಇದರ ಪ್ರಕಾರ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳಿಗೆ ಧಕ್ಕೆಯಾಗುವ ಯಾವುದೇ ಖಾಸಗಿ ಜಲಮೂಲಗಳನ್ನು ನಿಯಂತ್ರಿಸುವ / ನಿಷೇದಿಸುವ ಮತ್ತು ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ

ಆ) ಈ ನಿಯಮದ ಉದ್ದೇಶ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳ ಸಂರಕ್ಷಣೆ ಇದರ ಪ್ರಕಾರ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳಿಗೆ ಧಕ್ಕೆಯಾಗುವ ಯಾವುದೇ ಖಾಸಗೀ ಜಲಮೂಲಗಳನ್ನು ನಿಯಂತ್ರಿಸುವ / ನಿಷೇಧಿಸುವ ಮತ್ತು ಸ್ವಾಧೀನ ಪಡಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ

ಇ) ಇದರಿಂದ ಕುಡಿಯುವ ನೀರನ್ನು ಬಳಸಿಕೊಳ್ಳಲು ಅನುಕೂಲವಾಗುತ್ತದೆ ಹೊಸದಾಗಿ ಬೋರ್‌ವೆಲ್ ಕೊರೆಯಬೇಕಾದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ ಕನಿಷ್ಠ 500 ಮೀ ಅಂತರ ಇರಬೇಕೆಂದು ನಿಬಂಧನೆ ಇರುತ್ತದೆ

ಈ) ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಗ ಧಕ್ಕೆಯಾದಲ್ಲಿ ಅವುಗಳಿಂದ ನಿಶ್ಚಿತ ಅವಧಿಯವರೆಗೆ ನೀರು ತೆಗೆಯುವುದನ್ನು ನಿಷೇಧಿಸಲಾಗುವುದು ಇಲ್ಲವೆ, ಸದರಿ ಬಾವಿಗಳನ್ನು ಮುಚ್ಚಲಾಗುವುದು